JSS MAHAVIDYAPEETHA

# JSS COLLEGE FOR WOMEN

KOLLEGAL - 571440, CHAMARAJANAGAR DIST

Affiliated to Chamarajanagara University and Re-Accredited by NAAC with B+

☎: 08224-252149 : 08224-256051 Email: jsscwk@gmail.com

www.jsscwkgl.org

## IQAC Initiative
## Soft Skill Training Programme
## In association with NAANDI FOUNDATION Bangalore

Date: 23/2/2026 Time:10.30AM Place: Auditorium

**Organized By**
**Career And Placement Cell**

### INAUGURAL FUNCTION

**Inauguration**

**S.Preethi lekha(sopc)**
Trainer Naandi Foundation
KGF

**Anitha Raj**
Trainer Naandi Foundation
Bangalore

**President**

**Dr. H S Kongalappa**
Principal

**Presence**

**Smt. Mamatha.S**
IQAC Co-Ordinator

**Smt. Bhavya B.R**
Placement cell Co-Ordinator

Cordial Welcome to all By
Principal
And
Staff Member

ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಮಹಿಳಾ ಕಾಲೇಜು
ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ
**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**
☎: 08224-252149 jsscwk@gmail.com www. jsscwkgl.org

## Soft Skill Training Programme

ಕೊಳ್ಳೇಗಾಲ: 23-02-2026 ರಂದು ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಐಕ್ಯೂಎಸಿ ಮತ್ತು ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಸಾಫ್ಟ್‌ಸ್ಕಿಲ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಲೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಮತಿ ಎಸ್ ಪ್ರೀತಿ ಲೇಖ, ತರಬೇತಿದಾರರು, ನಾಂದಿಫೌಂಡೇಶನ್, ಬೆಂಗಳೂರು ಇವರು ಇಂದು ಹೆಚ್ಚಿನ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ನಂತರ ಸಂದರ್ಶವನ್ನು ಒಳಗೊಂಡಿರುತ್ತವೆ. ಈ ಕೌಶಲ್ಯಗಳ ಕೊರತೆಯ ಕಾರಣದಿಂದಾಗಿ Placement ಪ್ರಕ್ರಿಯೆಯಲ್ಲಿ . ಸೋಲನ್ನು ಅನುಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಕೌಶಲ್ಯಗಳು ವ್ಯಕ್ತಿಯ ವೃತ್ತಿ ಜೀವನ ಮತ್ತು ವೈಯಕ್ತಿಕ ಜೀವನದ ಯಶಸ್ವಿಗೆ ಕಾರಣವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್ ಎಂ ನಾಗಭೂಷಣ್ ರವರು ಮಾತನಾಡಿ ವಿದ್ಯಾರ್ಥಿಗಳ ವ್ಯಕ್ತಿತ್ವ ಪೋಷಕರು ಮತ್ತು ಶಿಕ್ಷಕರಿಂದ ರೂಪುಗೊಳ್ಳುವುತ್ತದೆ. ವ್ಯಕ್ತಿತ್ವ ಸಾಮಾಜಿಕ ನಡವಳಿಕೆಯಂತಹ ಕ್ರಿಯೆಗಳಿಂದ ಮೃದು ಕೌಶಲ್ಯಗಳು ರೂಪುಗೊಳ್ಳುತ್ತವೆ. ನಂತರದಲ್ಲಿ ವಿದ್ಯಾರ್ಥಿಗಳ ಬೆಳವಣಿಗೆಯು ಪರಿಸರವನ್ನು ಅವಲಂಭಿಸಿ ವಿಸ್ತರಿಸುತ್ತದೆ. ಪದವಿ ಪ್ರಮಾಣಪತ್ರಗಳು ವಿದ್ಯಾರ್ಥಿಗಳ ಜ್ಞಾನದ ಸಂಕೇತವಾದರೆ ಉತ್ತಮ ವ್ಯಕ್ತಿತ್ವ ಜೀವನ ವಿಕಸನಕ್ಕೆ ಪೂರಕವಾಗಿ ಉದ್ಯೋಗದಲ್ಲಿನ ಯಶಸ್ವಿಗೆ ಸಾಫ್ಟ್ ಸ್ಕಿಲ್‌ಗಳು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳಿಗೆ ಅದರ ಮಹತ್ವವನ್ನು ತಿಳಿಸಿದರು.

ನಂತರ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ ಅವರು ಮಾತನಾಡಿ "ಸಾಫ್ಟ್‌ಸ್ಕಿಲ್ ತರಭೇತಿಯಿಂದ ವೃತ್ತಿಪರ ಅಭಿವೃದ್ಧಿ, ಪರಿಣಾಮಕಾರಿ ಸಂವಹನ, ಕಾರ್ಯಕ್ಷಮತೆಯ ಆಧಿಕ ಸಮಸ್ಯೆಗಳ ಸುಲಭ ಪರಿಹಾರ, ಸಮಯ ನಿರ್ವಹಣೆ, ನಾಯಕತ್ವದ ಗುಣ ಮುಂತಾದ ಉಪಯೋಗಗಳನ್ನು ವಿದ್ಯಾರ್ಥಿಗಳು ಪಡೆಯಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಶ್ರೀಮತಿ ಭವ್ಯ ಬಿ.ಆರ್ ರವರು ಉಪಸ್ಥಿತರಿದ್ದರು. ಅಂತಿಮ ಪದವಿ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಾಫ್ಟ್ ಸ್ಕಿಲ್ ತರಬೇತಿ ಕಾರ್ಯಕ್ರಮ ಉದ್ಘಾಟನೆ. ಚಿತ್ರದಲ್ಲಿ ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಶ್ರೀಮತಿ ಭವ್ಯ ಬಿ.ಆರ್, ಕನ್ನಡ ವಿಭಾಗದ ಮುಖ್ಯಸ್ಥರು ಶ್ರೀ ಹೆಚ್ ಎಂ ನಾಗಭೂಷಣ್, ಶ್ರೀಮತಿ ಎಸ್ ಪ್ರೀತಿ ಲೇಖ, ತರಬೇತಿದಾರರು, ನಾಂದಿಫೌಂಡೇಶನ್ ಮತ್ತು ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ ರವರನ್ನು ಕಾಣಬಹುದು.




ಶ್ರೀಮತಿ ಎಸ್ ಪ್ರೀತಿ ಲೇಖ, ತರಬೇತಿದಾರರು, ನಾಂದಿಫೌಂಡೇಶನ್ ಇವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಶ್ರೀಮತಿ ಭವ್ಯ ಬಿ.ಆರ್, ಕನ್ನಡ ವಿಭಾಗದ ಮುಖ್ಯಸ್ಥರು ಶ್ರೀ ಹೆಚ್ ಎಂ ನಾಗಭೂಷಣ್ ಮತ್ತು ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ ರವರನ್ನು ಕಾಣಬಹುದು




